MARCH 13, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್** ನಿಧಿ; 22ನೇ ಕಂತು, ಇಂದು ಬಿಡುಗಡೆ; ಕರ್ನಾಟಕದ, 41 ಲಕ್ಷ 40 ಸಾವಿರ ರೈತರಿಗೆ, ಆರ್ಥಿಕ ನೆರವು.
- **ಕಲಬೆರಕೆ ಹಾಲು ಪರೀಕ್ಷಿಸುವ ಕಿಟ್**; ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ, ಲಭ್ಯ.
- **ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ**, 'ನಾವಿನ್ಯತೆಯಲ್ಲಿ ಶ್ರೇಷ್ಠತೆ', ರಾಷ್ಟ್ರೀಯ ಪುರಸ್ಕಾರ.
- **'ಸಂಸದರ ಕ್ರೀಡಾ ಮಹೋತ್ಸವ**; ಧಾರವಾಡದಲ್ಲಿ, ಇಂದು ಮತ್ತು ನಾಳೆ, ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ.

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ**, ಅಸ್ಸಾಂ'ನ ಗುವಾಹಟಿಯಲ್ಲಿ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ, 22ನೇ ಕಂತನ್ನು ಇಂದು ಸಂಜೆ 5 ಗಂಟೆಗೆ ಬಿಡುಗಡೆ ಮಾಡಲಿದ್ದಾರೆ. ಹೊಸ ದಿಲ್ಲಿಯಲ್ಲಿ ಮಾತನಾಡಿದ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ್, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ, ಪ್ರಸಕ್ತ 22ನೇ ಕಂತಿನಲ್ಲಿ, ಕರ್ನಾಟಕ ರಾಜ್ಯದ, ಒಟ್ಟು 41 ಲಕ್ಷ 40 ಸಾವಿರದ 106 ಫಲಾನುಭವಿಗಳಿಗೆ, 828 ಕೋಟಿ ರೂಪಾಯಿಗಳ, ಆರ್ಥಿಕ ನೆರವು ಸಿಗಲಿದೆ. ಇದು ವರೆಗೆ ರೈತರಿಗೆ, 4 ಲಕ್ಷದ 9 ಸಾವಿರ ಕೋಟಿ ರೂಪಾಯಿಗಳಿಗೂ, ಹೆಚ್ಚಿನ ಹಣವನ್ನು ವರ್ಗಾಯಿಸಲಾಗಿದೆ. ಮುಂದಿನ ಕಂತಿನ ಬಿಡುಗಡೆಯೊಂದಿಗೆ, ಒಟ್ಟು ಮೊತ್ತ, 4 ಲಕ್ಷ 27 ಸಾವಿರ ಕೋಟಿ ರೂಪಾಯಿ ಮೀರಲಿದೆ ಎಂದರು.

<><><>

**ಹಾಲಿನಲ್ಲಿ ಕಲಬೆರಕೆ ಪತ್ತೆ** ಹಚ್ಚಲು, ಕರ್ನಾಟಕ ಹಾಲು ಮಹಾಮಂಡಳದ, ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯ, ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ, Adulteration testing kit ಒದಗಿಸಲಾಗಿದೆ; ಸಂಘಗಳಲ್ಲಿ ಸ್ವೀಕರಿಸಿದ ಹಾಲನ್ನು, ಡೇರಿ ಹಂತದಲ್ಲಿಯೂ ಪರೀಕ್ಷೆಗೊಳಪಡಿಸಲಾಗುತ್ತಿದೆ ಎಂದು, ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

ವಿಧಾನಪರಿಷತ್‌ನ ಪ್ರಶ್ನೋತ್ತರ ವೇಳೆಯಲ್ಲಿ, ಶಾಸಕ ಮಧು ಮಾದೇಗೌಡ ಅವರ ಪ್ರಶ್ನೆಗೆ, ಮುಖ್ಯಮಂತ್ರಿಗಳ ಪರವಾಗಿ ಸಚಿವರು, ಉತ್ತರಿಸಿದರು. ಕಲಬೆರಕೆ ಪ್ರಕರಣಗಳು ಕಂಡು ಬಂದಲ್ಲಿ, ಪುನರಾವರ್ತನೆಯಾಗದಂತೆ, ಸಂಬಂಧಿಸಿದವರಿಗೆ ಸೂಕ್ತ ಎಚ್ಚರಿಕೆ ನೀಡಲಾಗುತ್ತಿದೆ ಎಂದರು.

<><><>

**ಕಳೆದ 2025-26ನೇ ಸಾಲಿನಲ್ಲಿ,** ಬೆಂಗಳೂರು ಮಿಲ್ಕ್ ಯೂನಿಯನ್ ಲಿಮಿಟೆಡ್, ಬಮೂಲ್, 3 ಸಾವಿರದ 400 ಕೋಟಿ ರೂಪಾಯಿ, ವಹಿವಾಟು ಕೈಗೊಂಡಿದೆ ಎಂದು, ಅಧ್ಯಕ್ಷ ಡಿ.ಕೆ. ಸುರೇಶ, ತಿಳಿಸಿದ್ದಾರೆ. ಬೆಂಗಳೂರಿನ ಡೇರಿ ವೃತ್ತದ ಬಮುಲ್ ಕಚೇರಿಯಲ್ಲಿ ಮಾತನಾಡಿ, 1 ಲಕ್ಷ 27 ಸಾವಿರದ 644 ಜನ ಹಾಲು ಉತ್ಪಾದಕರಿಗೆ, ಪ್ರತಿ ಲೀಟರ್‌ಗೆ 1 ರೂಪಾಯಿ, ಹೆಚ್ಚುವರಿ ಹಣ, ನೀಡಲಾಗುವುದು ಎಂದು, ಅವರು ಪ್ರಕಟಿಸಿದರು. ಸಾವಿರದ 800 ಗುತ್ತಿಗೆ ಕಾರ್ಮಿಕರಿಗೆ, ತಲಾ 5 ಸಾವಿರ ರೂಪಾಯಿ ಬೋನಸ್ ಹಾಗೂ ಕಾರ್ಮಿಕರಿಗೆ ಬಾಕಿ ಇದ್ದ, 4 ಕೋಟಿ 68 ಲಕ್ಷ ರೂಪಾಯಿ ಡಿ.ಎ. ನೀಡಲು ತೀರ್ಮಾನಿಸಲಾಗಿದೆ, ಎಂದರು.

<><><>

**ದೌರ್ಜನ್ಯಕ್ಕೀಡಾದ ಸಂತ್ರಸ್ಥ ಮಹಿಳೆಯರು,** ಸಹಾಯ, ಸಹಕಾರ ಕೋರಿ, ಪೊಲೀಸ್‌ಠಾಣೆ, ಸಾಂತ್ವನ ಕೇಂದ್ರ, ಸಖಿ ಕೇಂದ್ರಗಳಿಗೆ ಆಗಮಿಸಿದಾಗ, ಅಧಿಕಾರಿ ಹಾಗೂ ಸಿಬ್ಬಂದಿ, ಮಾನವೀಯತೆ ಮತ್ತು ಲಿಂಗಸೂಕ್ಷ್ಮತೆಯಿಂದ ವರ್ತಿಸುವಂತೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ನಾಗಲಕ್ಷ್ಮೀ ಚೌಧರಿ, ಸೂಚಿಸಿದ್ದಾರೆ. ತುಮಕೂರಿನಲ್ಲಿ ಮಾತನಾಡಿದ ಅವರು, ತಿಂಗಳಿಗೊಮ್ಮೆ ಪಂಚಾಯ್ತಿ ಮಟ್ಟದಲ್ಲಿ, ಗ್ರಾಮ ಸಭೆಗಳನ್ನು ನಡೆಸಿ, ಮಹಿಳೆಯರ ಸಮಸ್ಯೆಗಳಿಗೆ, ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳುವಂತೆ, ಜಿಲ್ಲಾಡಳಿತಕ್ಕೆ ನಿರ್ದೇಶಿಸಲಾಗಿದೆ. ಸಾಂತ್ವನ ಕೇಂದ್ರಗಳನ್ನು ಮುಂದುವರೆಸುವಂತೆ, ಆಯೋಗ, ಸರ್ಕಾರದ ಮನವೊಲಿಸಲಿದೆ ಎಂದರು.

<><><>

**ಗರ್ಭಕಂಠದ ಕ್ಯಾನ್ಸರ್‌ನಿಂದ**ಬಳಲುವವರಲ್ಲಿ, ಶೇಕಡ 50 ರಷ್ಟು ಮಹಿಳೆಯರು, ಚಿಕಿತ್ಸೆ ಸಂದರ್ಭದಲ್ಲಿ ಸಾವನ್ನಪ್ಪುತ್ತಿದ್ದು, ಉಳಿದೆಲ್ಲ ಕ್ಯಾನ್ಸರ್‌ಗಿಂತ, ಸರ್ವಿಕಲ್ ಕ್ಯಾನ್ಸರ್ ಬಗ್ಗೆ, ಹೆಚ್ಚಿನ ಮುಂಜಾಗ್ರತೆ ಅವಶ್ಯ ಎಂದು, ವಿಜಯನಗರ ಜಿಲ್ಲೆ, ಆರೋಗ್ಯಾಧಿಕಾರಿ, ಶಂಕರ್ ನಾಯಕ, ತಿಳಿಸಿದ್ದಾರೆ.

<><><>

**ಡಾಕ್ಟರ್ ಶಂಕರ ನಾಯಕ ಧ್ವನಿ 37 ಸೆಕೆಂದುಗಳು**

<><><>

**ಕೇಂದ್ರ ಆರೋಗ್ಯ ಮತ್ತು ಕುಟುಂಬ** ಕಲ್ಯಾಣ ಸಚಿವಾಲಯದ ಸಹಭಾಗಿತ್ವದಲ್ಲಿ, ರಾಜ್ಯ ಆರೋಗ್ಯ ಇಲಾಖೆ, ಮುಂಬರುವ ಮೂರು ತಿಂಗಳುಗಳ ಕಾಲ, 14 ವರ್ಷ ವಯಸ್ಸಿನ ಬಾಲಕಿಯರಿಗೆ, ಗರ್ಭಕಂಠದ ಕ್ಯಾನ್ಸರ್ ತಡೆ ಲಸಿಕೆ, ಉಚಿತವಾಗಿ ನೀಡಲಿದೆ.

<><><>

**ವಿಶ್ವದಲ್ಲಿ, ಗರ್ಭಕಂಠದ** ಕ್ಯಾನ್ಸರ್‌ಗೆ ತುತ್ತಾಗುವವರಲ್ಲಿ, ಭಾರತ, ಎರಡನೇ ಸ್ಥಾನದಲ್ಲಿದೆ. ದೇಶಾದ್ಯಂತ ಹ್ಯೂಮನ್ ಪ್ಯಾಪಿಲೋಮ ವೈರಸ್, ಎಚ್.ಪಿ.ವಿ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಮೈಸೂರು ನಗರ ಸಾರಿಗೆ,** ತನ್ನ 200 ಬಸ್‌ಗಳಲ್ಲಿ, ಜರ್ಮನಿಯ GiZ ಸಂಸ್ಥೆಯ ಸಹಯೋಗದಲ್ಲಿ, *'ಧ್ವನಿ ಸ್ಪಂದನ: ಆನ್ ಬೋರ್ಡ್ ಬಸ್ ಐಡೆಂಟಿಫಿಕೇಶನ್ ಆಂಡ್ ನೇವಿಗೇಶನ್ ಸಿಸ್ಟಮ್'* ಅನ್ನು ಯಶಸ್ವಿಯಾಗಿ, ಜಾರಿಗೊಳಿಸಿದೆ. ದೃಷ್ಟಿ ವಿಶೇಷಚೇತನ ಪ್ರಯಾಣಿಕರಲ್ಲಿ, ಅವಲಂಬನೆ ಕಡಿಮೆ ಮಾಡಿ, ಆತ್ಮವಿಶ್ವಾಸ, ಸುರಕ್ಷತೆ ಮತ್ತು ಸಂಚಾರದ ಸ್ವಾತಂತ್ರ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಹಿನ್ನೆಲೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ, 'ನಾವಿನ್ಯತೆಯಲ್ಲಿ ಶ್ರೇಷ್ಠತೆ' 'Excellence in Innovation' ರಾಷ್ಟ್ರೀಯ ಪುರಸ್ಕಾರ, ಲಭಿಸಿದೆ. ಹೊಸ ದಿಲ್ಲಿಯ, ನೆಹರೂ ಪ್ಲೇಸ್‌ನಲ್ಲಿ, ಕೆ.ಎಸ್.ಆರ್.ಟಿ.ಸಿ. ನಿರ್ದೇಶಕಿ, ಕೆ.ಎಂ.ಗಾಯಿತ್ರಿ Governance Now ಸಂಸ್ಥೆಯ, ವ್ಯವಸ್ಥಾಪಕ ನಿರ್ದೇಶಕ,  ಕೈಲಾಶ್ ಅಧಿಕಾರಿ ಮತ್ತು ಅಮಿತ್ ಸಾದ್ ಅವರಿಂದ, ಪ್ರಶಸ್ತಿಯನ್ನು ಸ್ವೀಕರಿಸಿದರು.

<><><>

**ಕೈಮಗ್ಗ ಮತ್ತು ಜವಳಿ ಇಲಾಖೆ,** 'ಪವಿತ್ರ ವಸ್ತ್ರ' ಯೋಜನೆಯಡಿ, ಬೆಳಗಾವಿಯ, ಟಿಳಕವಾಡಿಯ, ಭಾಗ್ಯನಗರದ ರಾಮನಾಥ ಮಂಗಲ ಕಾರ್ಯಾಲಯದಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ಕೈಮಗ್ಗ, ನೈಸರ್ಗಿಕ ಬಣ್ಣದ ಹತ್ತಿಬಟ್ಟೆ ಹಾಗೂ ಕೈ ಉತ್ಪನ್ನಗಳ, ಪ್ರದರ್ಶನ ಮತ್ತು ಮಾರಾಟ ಮೇಳವನ್ನು, ಬೆಳಗ್ಗೆ 10:30 ರಿಂದ, ರಾತ್ರಿ 8:30ರ ವರೆಗೆ ಆಯೋಜಿಸಿದೆ.

ನಾಗನೂರು ರುದ್ರಾಕ್ಷಿಮಠದ, ಶ್ರೀ ಅಲ್ಲಮಪ್ರಭು ಸ್ವಾಮೀಜಿ, ಇಂದು ಬೆಳಗ್ಗೆ 11.30ಕ್ಕೆ ಮೇಳವನ್ನು ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಹಿರಿಯ ವಿನ್ಯಾಸಕಾರ, ಗೋಪಿಕೃ ್ಣ, ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆಯ, ಪಶ್ಚಿಮ ವಲಯದ, ಜಂಟಿ ನಿರ್ದೇಶಕ ಶಿವರಾಜ ಕುಲಕರ್ಣಿ, ಭಾಗವಹಿಸಲಿದ್ದಾರೆ. ಹೆಗ್ಗೋಡು, ಹೊನ್ನೇಸರದ, ಚರಕ ಮಹಿಳಾ ವಿವಿಧೋದ್ದೇಶ, ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷೆ, ಮಹಾಲಕ್ಷ್ಮೀ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಪ್ರದೇಶ ಸಮಾಚಾರಕ್ಕಾಗಿ,** ಚರಕ ಸಂಸ್ಥೆ ಕಾರ್ಯದರ್ಶಿ, ಎನ್.ರಮೇಶ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಚರಕ ಎನ್.ರಮೇಶ ಧ್ವನಿ 20 ಸೆಕೆಂದುಗಳು**

<><><>

**ಧಾರವಾಡ ಲೋಕಸಭಾ ಕ್ಷೇತ್ರದ,** 'ಸಂಸದರ ಕ್ರೀಡಾ ಮಹೋತ್ಸವ 2025–26'ರ ಅಂಗವಾಗಿ, ಇಂದು ಮತ್ತು ನಾಳೆ, ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ, ಧಾರವಾಡದ ಕರ್ನಾಟಕ ಕಾಲೇಜು ಆವರಣದ, ಮೈದಾನದಲ್ಲಿ ಆಯೋಜಿತವಾಗಿದೆ. 'ಫಿಟ್ ಇಂಡಿಯಾ: ಖೇಲೋ ಇಂಡಿಯಾ' ಉಪಕ್ರಮದಡಿ, 'ಸಂಸದ್ ಖೇಲ್ ಮಹೋತ್ಸವ'ವನ್ನು ಎಲ್ಲ ಲೋಕಸಭಾ ಕ್ಷೇತ್ರಗಳ, ಯುವ ಕ್ರೀಡಾ ಪ್ರತಿಭೆಗಳನ್ನು, ಗುರುತಿಸಲು, ಸಂಘಟಿಸಲಾಗಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ.

<><><>

**ಸಚಿವ ಪ್ರಲ್ಹಾದ ಜೋಶಿ ಧ್ವನಿ 25 ಸೆಕೆಂದುಗಳು**

<><><>

**ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ,** ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ಆಯೋಜಿತ, ಧಾರವಾಡ ಸಂಸದರ ಕ್ರೀಡಾ ಮಹೋತ್ಸವದಲ್ಲಿ, 31 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು, ಪಾಲ್ಗೊಂಡಿದ್ದು ವಿಶೇ ´ ಎಂದು, ಬಿಜೆಪಿ ಮುಖಂಡ ಅಮೃತ ದೇಸಾಯಿ, ಹೇಳಿದ್ದಾರೆ.

<><><>

**ವಿವಿಧ ಕಂಪೆನಿಗಳ, ಕಾರ್ಪೋರೆಟ್** ಸಾಮಾಜಿಕ ಹೊಣೆಗಾರಿಕೆ ನಿಧಿ, ಯೋಜನೆ ಅಡಿ,50 ಕೋಟಿ ರೂಪಾಯಿ ಅನುದಾನದಲ್ಲಿ, ಧಾರವಾಡದಲ್ಲಿ ನಿರ್ಮಾಣಗೊಂಡ, ನೂತನ ಕ್ರೀಡಾ ಸಂಕೀರ್ಣ ಹಾಗೂ ಅಂತಾರಾಷ್ಟ್ರೀಯ ಈಜುಗೊಳವನ್ನು, ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ ಮನ್ಸುಖ ಮಾಂಡವೀಯ ನಾಳೆ, ಉದ್ಘಾಟಿಸಲಿದ್ದಾರೆ. ಧಾರವಾಡದ ನ್ಯಾಯಾಲಯ ವೃತ್ತದ ಬಳಿಯ, ಕ್ರೀಡಾ ಸಂಕೀರ್ಣದಲ್ಲಿ, ಮಧ್ಯಾಹ್ನ 3:30ಕ್ಕೆ ಆಯೋಜಿತ ಸಮಾರಂಭದಲ್ಲಿ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಳ್ಳಲಿದ್ದಾರೆ. ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ ಭಾಗವಹಿಸಲಿದ್ದು, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ, ಸಂತೋಷ ಲಾಡ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಬೆಳಗಾವಿಯ ಆರ್.ಎಲ್. ಕಾನೂನು ಮಹಾವಿದ್ಯಾಲಯದಲ್ಲಿ,** ಇಂದಿನಿಂದ ನಾಲ್ಕು ದಿನಗಳ ವರೆಗೆ, ರಾಷ್ಟ್ರ ಮಟ್ಟದ ಕಲ್ಪಿತ ನ್ಯಾಯಾಲಯ ಸ್ಪರ್ಧೆ ನಡೆಯಲಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜ್ಯೋತಿ ಉದ್ಘಾಟಿಸಲಿದ್ದಾರೆ. ದೇಶದ ವಿವಿಧೆಡೆಯಿಂದ, ಕಾನೂನು ಅಧ್ಯಯನ ನಿರತ, ಆಯ್ದ 50 ವಿದ್ಯಾರ್ಥಿಗಳು ಕಲ್ಪಿತ ನ್ಯಾಯಾಲಯ ರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದು, ವಿಜೇತರಿಗೆ 1 ಲಕ್ಷ 30 ಸಾವಿರ ರೂಪಾಯಿ, ನಗದು ಬಹುಮಾನ, ದೊರೆಯಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್** ನಿಧಿ: 22ನೇ ಕಂತು, ಇಂದು ಬಿಡುಗಡೆ; ಕರ್ನಾಟಕದ, 41 ಲಕ್ಷ 40 ಸಾವಿರ ರೈತರಿಗೆ, ಆರ್ಥಿಕ ನೆರವು.
- **ಕಲಬೆರಕೆ ಹಾಲು ಪರೀಕ್ಷಿಸುವ ಕಿಟ್**; ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ, ಲಭ್ಯ.
- **ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ,** 'ನಾವಿನ್ಯತೆಯಲ್ಲಿ ಶ್ರೇಷ್ಠತೆ', ರಾಷ್ಟ್ರೀಯ ಪುರಸ್ಕಾರ.
- **'ಸಂಸದರ ಕ್ರೀಡಾ ಮಹೋತ್ಸವ**; ಧಾರವಾಡದಲ್ಲಿ, ಇಂದು ಮತ್ತು ನಾಳೆ, ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>